ಅನುಬಂಧ–I

ದಿನಾಂಕ 17–3–05ರ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

1805(2844) ಶ್ರೀ ಬಸವಣ್ಣೆಪ್ಪ ಜಿ.(ಹೊಳೆಹೊನ್ನೂರು): ಮಾನ್ಯ ಭಾರಿ, ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಲಭ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ರೋಗಗ್ರಸ್ತವಾಗಿರುವ ಕೈಗಾರಿಕೆಗಳ ಸಂಖ್ಯೆ ಎಷ್ಟು?

ಆ) ಅವುಗಳಲ್ಲಿ ತೊಡಗಿರುವ ಬಂಡವಾಳ ಎಷ್ಟು?

ಇ) ಈ ಕೈಗಾರಿಕೆಗಳಿಂದ ಎಷ್ಟು ಕಾರ್ಮಿಕರಿಗೆ ನಿರುದ್ಯೋಗ ಉಂಟಾಗಿದೆ.

ಈ) ಈ ನಿರುದ್ಯೋಗಿಗಳಿಗೆ ಸರ್ಕಾರ ನೀಡಿರುವ ಪರಿಹಾರ ಏನು?

ಶ್ರೀ ಪಿ.ಜಿ.ಆರ್.ಸಿಂಧ್ಯ (ಭಾರಿ, ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಲಭ್ಯ ಸಚಿವರು):

ಅ) ಭಾರತೀಯ ರಿಸರ್ವ್ ಬ್ಯಾಂಕಿನ ವರದಿಯ ಪ್ರಕಾರ ದಿನಾಂಕ:31.3.2004ರಂತೆ 3767 ರೋಗಗ್ರಸ್ತ ಸಣ್ಣ ಪ್ರಮಾಣ ಘಟಕಗಳಿರುತ್ತದೆ. ಬಿ.ಐ.ಎಫ್.ಆರ್./ಎ.ಎ.ಐ.ಎಫ್.ಆರ್. ಪ್ರಕಾರ 244 ಭಾರಿ ಮತ್ತು ಮಧ್ಯಮ ಕೈಗಾರಿಕಾ ಘಟಕಗಳು ಇರುತ್ತದೆ.

ಆ) ವಿವರಗಳು ಲಭ್ಯವಿರುವುದಿಲ್ಲ.

ಇ) ಕೆಲವು ರೋಗಗ್ರಸ್ತ ಘಟಕಗಳು ಅವುಗಳ ಕಾರ್ಯನಿರ್ವಹಣೆಯನ್ನು ಮುಂದುವರೆಸುತ್ತವೆ. ಉದ್ಯೋಗ ಕಳೆದುಕೊಂಡಿರುವ ಕಾರ್ಮಿಕರ ವಿವರ ಲಭ್ಯವಿರುವುದಿಲ್ಲ.

ಈ) ಸರ್ಕಾರದ ವತಿಯಿಂದ ಯಾವುದೇ ಪರಿಹಾರ ಲಭ್ಯವಿರುವುದಿಲ್ಲ.

1806(2329) ಶ್ರೀ ಬಸವರಾಜ್ ರಾಯರೆಡ್ಡಿ (ಯಲಬುರ್ಗ): ಮಾನ್ಯ ಭಾರಿ, ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಇಲ್ಲಿಯವರೆಗೆ ಸ್ಥಾಪಿತವಾಗಿರುವ ಭಾರಿ, ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು):

ಆ) ಆ ಪೈಕಿ ಕಾರ್ಯನಿರ್ವಹಿಸುತ್ತಿರುವ ಹಾಗೂ ಸ್ಥಗಿತಗೊಂಡಿರುವ ಕಾರ್ಖಾನೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು):

ಇ) ಮುಚ್ಚಲ್ಪಟ್ಟಿರುವ ಕಾರ್ಖಾನೆಗಳ ಪುನಶ್ಚೇತನಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಈ) ಮುಚ್ಚಲ್ಪಟ್ಟಿರುವ ಕಾರ್ಖಾನೆಗಳಿಗೆ ಸರ್ಕಾರದ ವತಿಯಿಂದ ಜಮೀನು ನೀಡಿದ್ದಲ್ಲಿ ಸದರಿ ಜಮೀನು ನೀಡಿದ್ದಲ್ಲಿ ಸದರಿ ಜಮೀನುಗಳನ್ನು ವಾಪಸ್ಸುಪಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಪಿ.ಜಿ.ಆರ್.ಸಿಂಧ್ಯ (ಭಾರಿ, ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಸಚಿವರು):

ಅ) ರಾಜ್ಯದಲ್ಲಿ ದಿನಾಂಕ 31.1.2005ರ ಅಂತ್ಯಕ್ಕೆ 3,17,576 ಸಣ್ಣ ಕೈಗಾರಿಕೆಗಳು ನೋಂದಾಯಿತವಾಗಿರುತ್ತದೆ. ಹಾಗೂ 31.12.2003ರ ಅಂತ್ಯಕ್ಕೆ 1044 ಭಾರಿ, ಮತ್ತು ಮಧ್ಯಮ ಕೈಗಾರಿಕೆಗಳಿರುತ್ತವೆ ಜಿಲ್ಲಾವಾರು ವಿವರ ಲಗತ್ತಿಸಿದೆ.

ಆ) ಇವುಗಳ ಪೈಕಿ ಕಾರ್ಯನಿರ್ವಹಿಸುತ್ತಿರುವ ಭಾರಿ ಮತ್ತು ಮಧ್ಯಮ ಕೈಗಾರಿಕಾ ಘಟಕಗಳ ಸಂಖ್ಯೆ 670 ಹಾಗೂ ಸ್ಥಗಿತಗೊಂಡಿರುವ ಘಟಕಗಳ ಸಂಖ್ಯೆ 374. ಜಿಲ್ಲಾವಾರು ವಿವರ ಅನುಬಂದದಲ್ಲಿದೆ. ಮೂರನೇ ಅಖಿಲ ಭಾರತ ಸಣ್ಣ ಕೈಗಾರಿಕೆಗಳ ಗಣತಿಯ ಪ್ರಾಥಮಿಕ ವರದಿ ಪ್ರಕಾರ ಶೇಕಡಾ 37.65ರಷ್ಟು ಘಟಕಗಳು ಮುಚ್ಚಿರುತ್ತದೆ ಮತ್ತು 62.35ರಷ್ಟು ಘಟಕಗಳು ಕಾರ್ಯನಿರ್ವಹಿಸುತ್ತಿವೆ.

ಇ) ಸಣ್ಣ ಮತ್ತು ಅತಿ ಸಣ್ಣ ರೋಗಗ್ರಸ್ತ ಕೈಗಾರಿಕೆಗಳಿಗೆ ಪುನಶ್ಚೇತನಕ್ಕಾಗಿ ಪ್ರತ್ಯೇಕ ರೋಗಗ್ರಸ್ತ ಪುನಶ್ಚೇತನ ಕೈಗಾರಿಕಾ ನೀತಿಯಂತೆ ಸರ್ಕಾರದ ಆದೇಶ ಸಂಖ್ಯೆ ಸಿಐ 167 ಎಸ್.ಪಿ.ಐ 2001 ದಿ:25.9.2002ರಂತೆ ಪುನಶ್ಚೇತನಗೊಂಡ ರೋಗಗ್ರಸ್ತ ಕೈಗಾರಿಕೆಗಳಿಗೆ ಈ ಕೆಳಕಂಡ ರಿಯಾಯಿತಿಗಳನ್ನು ನೀಡಲಾಗುತ್ತದೆ.

1. ಘಟಕದ ಪುನಶ್ಚೇತನ ಯೋಜನಾ ವೆಚ್ಚದ ಶೇ.25ರಷ್ಟು ಹಣವನ್ನು ರೂ.2.50 ಲಕ್ಷಗಳನ್ನು ಮಿತಿಗೊಳಪಟ್ಟು ಬಡ್ಡಿರಹಿತ ಬೀಟಧನ ಸಾಲದ ರೂಪದಲ್ಲಿ ನೀಡಲಾಗುತ್ತದೆ.

2. ಕೆ.ಪಿ.ಟಿ.ಸಿ.ಎಲ್.ಗೆ ಬಾಕಿ ಇರುವ ಎನರ್ಜಿ ಬಿಲ್ ಮೊತ್ತವನ್ನು ಆರು ಅರ್ಧ ವಾರ್ಷಿಕ ಕಂತುಗಳಲ್ಲಿ ಪಾವತಿ ಮಾಡುವುದು ಮತ್ತು ಬಾಕಿಗೆ ಹಾಕಲಾಗುವ ಬಡ್ಡಿ ದರವನ್ನು ತಿಂಗಳಿಗೆ ಶೇ.ಅರ್ಧ ಕಡಿಮೆ ಮಾಡಲಾಗುವುದು.

3. ಘಟಕವು ಮುಚ್ಚಿರುವ ಅವಧಿಗೆ ಫಿಕ್ಸ್‌ಡ್ ಚಾರ್ಜನ್/ಡಿಮಾಂಡ್ ಚಾರ್ಜಸ್‌ನ್ನು ಕೆಪಿಟಿಸಿಎಲ್ ಹಾಕುವುದಿಲ್ಲ.

4. ವಾಣಿಜ್ಯ ತೆರಿಗೆ ಇಲಾಖೆಗೆ ಬಾಕಿ ಇರುವ ತೆರಿಗೆ ಮೊತ್ತವನ್ನು ತಿಂಗಳಿಗೆ ಶೇಕಡಾ ಅರ್ಧ ಬಡ್ಡಿದರದೊಂದಿಗೆ ಆರು ಅರ್ಧ ವಾರ್ಷಿಕ ಕಂತುಗಳಲ್ಲಿ ಪಾವತಿ ಮಾಡುವುದು.

5. ಕೈಗಾರಿಕಾ ಮುಚ್ಚಿರುವ ಅವಧಿಗೆ ಕೆಪಿಟಿಸಿಎಲ್ ಮತ್ತು ವಾಣಿಜ್ಯ ತೆರಿಗೆ ಇಲಾಖೆ ಬಡ್ಡಿಯನ್ನು ಲೆಕ್ಕಾಚಾರ ಮಾಡುವುದಿಲ್ಲ.

6. ಕೈಗಾರಿಕೆಗಳು ಭವಿಷ್ಯದಲ್ಲಿ ನೀಡಬೇಕಾಗಿರುವ ತೆರಿಗೆಯನ್ನು ಯಾವುದೇ ಬಡ್ಡಿ ಇಲ್ಲದೇ ಮೂರು ವರ್ಷಗಳವರೆಗೆ ಮುಂದೂಡಲಾಗುವುದು.

ಈ) ಕೈಗಾರಿಕಾ ಘಟಕಗಳಿಗೆ KIADB ವತಿಯಿಂದ ರಾಜ್ಯ ವಿವಿಧೆಡೆ ಸ್ಥಾಪಿಸಲಾದ ಕೈಗಾರಿಕಾ ಪ್ರದೇಶಗಳಲ್ಲಿ ನಿವೇಶನಗಳನ್ನು ಗುತ್ತಿಗೆ ಮತ್ತು ಮಾರಾಟ ಆಧಾರದ ಮೇಲೆ ನೀಡಲಾಗುತ್ತಿದೆ. ಈ ರೀತಿ ಗುತ್ತಿಗೆ ಮತ್ತು ಮಾರಾಟ ಆಧಾರದ ಮೇಲೆ ನೀಡಲಾದ ಜಮೀನನ್ನು ನಿಗದಿತ ಅವಧಿಯೊಳಗೆ ಕೈಗಾರಿಕೆ ಸ್ಥಾಪನೆ ಆಗದಿದ್ದಲ್ಲಿ ಮಾತ್ರ ಹಿಂದಕ್ಕೆ ಪಡೆಯುವ ಅವಕಾಶವಿರುತ್ತದೆ. ಕೈಗಾರಿಕೆ ಸ್ಥಾಪನೆಯಾದ ನಂತರ ಕೈಗಾರಿಕಾ ಜಮೀನು ಆಯಾ ಕೈಗಾರಿಕಾ ಘಟಕಗಳಿಗೆ ಹಸ್ತಾಂತರ ಶುದ್ರ ಕ್ರಯ ಪತ್ರದ ಮುಖಾಂತರ ಮಾಡಲಾಗುವುದು.

ವಿಧಾನ ಪರಿಷತ್ ಪ್ರಶ್ನೆ ಸಂಖ್ಯೆ: 2329ಕ್ಕೆ ಅನುಬಂಧ

ರಾಜ್ಯದಲ್ಲಿ ದಿನಾಂಕ 31-1-2005 ರ ಅಂತ್ಯಕ್ಕೆ ನೋಂದಣಿಯಾಗಿರುವ ಸಣ್ಣ ಕೈಗಾರಿಕೆಗಳ ಜಿಲ್ಲಾವಾರು ವಿವರ.

ಕ್ರ.ಸಂ.	ಜಿಲ್ಲಾ	ಘಟಕಗಳ ಸಂಖ್ಯೆ
1	ಬೆಂಗಳೂರು (ನ)	50040
2	ಬೆಂಗಳೂರು (ಗ್ರಾ)	21072
3	ಬೆಳಗಾಂ	27126
4	ಬಳ್ಳಾರಿ	12231
5	ಬೀದರ್	7269
6	ಬಿಜಾಪುರ	6063
7	ಚಿಕ್ಕಮಗಳೂರು	5915
8	ಚಿತ್ರದುರ್ಗ	7053
9	ಮಂಗಳೂರು	15067
10	ಧಾರವಾಡ	12264
11	ಗುಲ್ಬರ್ಗ	11851
12	ಹಾಸನ	8821
13	ಕೊಡಗು	4368
14	ಕೋಲಾರ	12277
15	ಮಂಡ್ಯ	7680
16	ಮೈಸೂರು	18070
17	ರಾಯಚೂರು	7725
18	ಶಿವಮೊಗ್ಗ	11750
19	ತುಮಕೂರು	18476
20	ಕಾರವಾರ	8994
21	ಬಾಗಲಕೋಟೆ	5883
22	ಚಾಮರಾಜನಗರ	7095
23	ದಾವಣಗೆರೆ	6708
24	ಗದಗ್	6390
25	ಹಾವೇರಿ	7399
26	ಕೊಪ್ಪಳ್	3748
27	ಉಡುಪಿ	6341
	ಒಟ್ಟು	3,17,576

LIST OF LARGE AND MEDIUM INDUSTRIES

Districts		Total Units			Working units			Closed units		
SL.NO.	Name of the Dist.	No. of total units	Employment	Investment (Rs.In crs)	No.of Workly units	Employment	Investment (Rs.In crs)	No. of Closed Units	Employment	Investment (Rs.In crs)
1	Bangalore (Urban)	457	212042	8922.53	268	141030	7856.53	189	71012	1068.00
2	Bangalore (Rural)	107	14690	1940.07	85	12509	1724.56	22	2181	215.51
3	Bagalkot	13	5670	323.64	10	4322	308.59	3	1348	15.05
4	Belgaum	37	19004	1392.80	32	16609	1322.37	5	2395	70.43
5	Bellary	26	7203	4321.00	20	2436	4044.18	6	4787	276.82
6	Bidar	33	4382	243.56	12	2285	121.00	21	2097	122.58
7	Bijapur	5	930	33.25	1	600	27.00	4	330	6.25
8	Chamarajnagar	6	1164	68.27	2	249	9.30	4	915	58.97
9	Chitradurga	20	2101	147.80	13	1412	120.17	7	889	27.83
10	Chickmagalur	3	2507	1221.12	2	1889	1221.12	1	818	0.00
11	Davanagere	9	5115	204.86	8	2478	137.51	3	2637	67.35
12	Dharwad	39	10940	314.14	20	5478	156.78	18	5481	157.35
13	Dakshina Kannada	14	5315	7428.47	13	5247	7426	1	68	0.47
14	Gadag	7	2782	55.40	4	1896	21.86	3	888	33.54
15	Gulbarga	19	11350	1267.97	7	8039	889.00	12	5311	578.97
16	Hasssan	9	2426	490.00	6	1667	206.87	3	759	283.33

17	Haveri	8	4999	140.18	6	4944	140.16	2	65	0.00
18	Karwar	12	5205	585.5	5	4007	413.00	7	1198	152.50
19	Kodagu	0	0	0	0	0	0	0	0	0.00
20	Kolar	20	27785	16553.49	11	15144	10897.59	9	12841	5855.80
21	Koppal	10	2132	760.00	10	2132	780.00	0	0	0.00
22	Mandya	9	3540	662.18	8	3540	651.00	0	0	11.19
23	Mysore	130	24071	2098.71	85	20429	1842.53	45	3842	256.18
24	Raichur	12	7527	2111.50	8	8797	2008.50	4	730	13.00
25	Shimoga	9	7177	1360.84	8	7100	1252,24	1	77	108.60
26	Tumkur	21	4081	328.95	19	3239	259.50	2	852	69.45
27	Udupi	9	1669	104.49	8	1609	104.48	1	80	0.00
	Total:	1044	396817	53058.71	870	275088	43611.00	374	120729	8447.05